# ಸ್ಮೃತಿಸೌರಭ

ಮೂಲ: **ಸೊಹ್ರಾಬ್ ಮೋದಿ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

೧೯೧೮ರಲ್ಲಿ ನಡೆದ ಘಟನೆ. ನಾನು ಆಗಿನ್ನೂ ತರುಣ. ನನ್ನ ತಂದೆ ಶ್ರೀರಾಮಕೃಷ್ಣರ ಭಕ್ತರಾಗಿದ್ದರು. ಅವರಿಂದಲೇ ನಾನು ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿದ್ದ ಶ್ರೀಮಾತೆ ಶಾರದಾ ದೇವಿಯವರ ಬಗ್ಗೆ ಕೇಳಿದ್ದೆ. ಅವರೇ ನನ್ನನ್ನು ಬಾಂಬೇ (ಮುಂಬೈ) ಯಿಂದ ಕಲ್ಕತ್ತೆಗೆ ಶ್ರೀಮಾತೆಯವರ ದರ್ಶನ ಮಾಡಲು ಕಳುಹಿಸಿ ಕೊಟ್ಟಿದ್ದರು. ನಾನು ಕಲ್ಕತ್ತೆಗೆ ಬಂದು ಶ್ರೀಮಾತೆಯವರ ದರ್ಶನ ಮಾಡಲು ಬಾಗ್‌ಬಜಾರ್‌ಗೆ ಹೋಗಿದ್ದೆ. ಆಗ ಅವರಿಗೆ ಅತ್ಯಂತ ಅನಾರೋಗ್ಯವಿತ್ತು. ಆದ ಕಾರಣ, ಭಕ್ತರು ಅವರ ದರ್ಶನ ಮಾಡುವುದನ್ನು ನಿಲ್ಲಿಸಲಾಗಿದೆ ಎಂದು ಕೇಳಿದೆ. ನಾನು ಸ್ವಾಮಿ ಶಾರದಾನಂದರಿಗೆ ಪ್ರಣಾಮ ಮಾಡಿ ಹೇಳಿದೆ: ''ನಾನು ಶ್ರೀಮಾತೆಯವರ ದರ್ಶನ ಪಡೆಯಲು ಬಾಂಬೇಯಿಂದ ಬಂದಿದ್ದೇನೆ. ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದುಕೊಳ್ಳಬೇಕು ಎಂದು ನನ್ನಾಸೆ.'' ನನ್ನ ಹಂಬಲವನ್ನು ಕಂಡು ಅವರಿಗೆ ನನ್ನ ಮೇಲೆ ಕರುಣೆ ಉಕ್ಕಿಬಂತು. ಸಂನ್ಯಾಸಿಯೊಬ್ಬರ ಜೊತೆಗೆ ಅವರು ನನ್ನನ್ನು ಶ್ರೀಮಾತೆಯವರ ದರ್ಶನ ಮಾಡಿಸಲು ಕಳುಹಿಸಿ ಕೊಟ್ಟರು. ಶ್ರೀಮಾತೆಯವರ ಬಳಿ ನನ್ನ ಕೋರಿಕೆಯನ್ನು ಪ್ರಾರ್ಥಿಸಿ ಕೊಳ್ಳಬೇಕೆಂದು ಅವರು ತಿಳಿಸಿದರು. ನಾನು ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಅತ್ಯಂತ ಕಾತರದಿಂದ ದೀಕ್ಷೆಗಾಗಿ ಪ್ರಾರ್ಥಿಸಿ ಕೊಂಡೆ. ಅವರು ಕರುಣೆಯಿಂದ ಪರವಶರಾಗಿ, ಆ ಕೂಡಲೇ ನನಗೆ ಮಂತ್ರದೀಕ್ಷೆ ನೀಡಿದರು. ಅವರಿಗೆ ನನ್ನ ಭಾಷೆ ಅರ್ಥವಾಗುತ್ತಿರಲಿಲ್ಲ. ನನಗೂ ಬಂಗಾಳಿ ಗೊತ್ತಿರಲಿಲ್ಲ. ಹಾಗಿದ್ದರೂ ಅವರ ಮಾತುಗಳನ್ನು ಅರ್ಥಮಾಡಿಕೊಳ್ಳಲು ನನಗೇನೂ ಕಷ್ಟವಾಗಲಿಲ್ಲ ; ಅವರಿಗೂ ನನ್ನ ಮಾತುಗಳನ್ನು ಅರಿತುಕೊಳ್ಳಲು ಏನೂ ತೊಂದರೆಯಾಗಲಿಲ್ಲ. ಶ್ರೀಮಾತೆಯವರು ಬಂಗಾಳಿಯಲ್ಲೇ ಮಾತನಾಡಿದ್ದರು; ನಾನು ಹಿಂದಿಯಲ್ಲಿ ಮಾತನಾಡಿದೆ. ಅವರಿಂದ ಬೀಳ್ಕೊಳ್ಳುವಾಗ ನಾನು ಹೇಳಿದೆ, ''ಮಾಯೀಜಿ, ಮೈಂ ಜಾ ರಹಾ ಹೂಂ'' (ಅಮ್ಮಾ ನಾನಿನ್ನು ಹೊರಡುತ್ತೇನೆ.) ಶ್ರೀಮಾತೆಯವರು ಬಂಗಾಳಿಯಲ್ಲಿ ಹೇಳಿದರು: ''ಹೋಗುತ್ತೇನೆ ಅನ್ನಬಾರದು ಮಗೂ, 'ಬರುತ್ತೇನೆ' ಅನ್ನು.'' ಶ್ರೀಮಾತೆಯವರ ಸೇವಕರೊಬ್ಬರು ಅವರ ಮಾತುಗಳನ್ನು ಇಂಗ್ಲಿಷಿಗೆ ಅನುವಾದಿಸಿ ನನಗೆ ಹೇಳಿದರು, ''Mother says, don't say 'I am going', say 'I am coming' ''. ಅದನ್ನು ಕೇಳಿ ನಾನು ದಂಗಾದೆ! ನಾನು 'ಹೋಗುತ್ತೇನೆ' ಎಂದಿದ್ದೆ, ಶ್ರೀಮಾತೆಯವರು 'ಬರುತ್ತೇನೆ' ಎಂದು ಹೇಳಲು ಹೇಳುತ್ತಿದ್ದಾರೆ! ಬಂಗಾಳದಲ್ಲಿ ಬೀಳ್ಕೊಡುವಾಗ ಈ ರೀತಿ ಹೇಳುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ. ಇರಲಿ, ನಾನು ಬಾಂಬೇಗೆ ಹಿಂದಿರುಗಿದೆ. ಜೊತೆಗೆ ನಾನು ಒಂದು ಮಧುರವಾದ ನೆನಪನ್ನೂ ಹೊತ್ತೊಯ್ದಿದ್ದೆ.



ಶ್ರೀಮಾತೆಯವರು ಪ್ರೀತಿಯಿಂದ ಪರಿಪೂರ್ಣರಾಗಿದ್ದಾರೆ ಎಂದು ನನಗನ್ನಿಸಿತ್ತು. ನನಗನ್ನಿಸಿತ್ತು, She was wonderful and beautiful. ಅದಾದ ನಂತರ ಎಷ್ಟೋ ವರ್ಷಗಳು ಕಳೆದವು; ನಾನೀಗ ವೃದ್ಧನಾಗಿದ್ದೇನೆ. ದೀರ್ಘವಾದ ಈ ಜೀವನ ಯಾತ್ರೆಯಲ್ಲಿ ನಾನು ಶ್ರೀಮಾತೆಯವರ ಮಾತುಗಳನ್ನು ಮರೆತುಬಿಟ್ಟಿದ್ದೇನೆ. ಈಗ ನಾನು ಮೇಲಿನ ಲೋಕದ ಕರೆಗಾಗಿ ಕಾಯುತ್ತಿದ್ದೇನೆ — ಯಾವುದೇ ಕ್ಷಣದಲ್ಲಾದರೂ ಆ ಕರೆ ಬಂದುಬಿಡಬಹುದು. ಈಗ ನನಗೆ ಈ ಭೂಮಿಯ ಯಾವುದರ ಮೇಲೂ ಆಕರ್ಷಣೆಯಿಲ್ಲ. ಇಷ್ಟು ಕಾಲ ಮರೆತುಹೋಗಿದ್ದ ಶ್ರೀಮಾತೆಯವರ ನೆನಪು ಮಾತ್ರವೇ ನನಗಾಗುತ್ತಿದೆ. ಅವರ ಅಪೂರ್ವವಾದ ಆ ಕೊನೆಯ ಮಾತುಗಳೇ ನನ್ನ ಕಿವಿಯಲ್ಲಿ ಅನುರಣಿಸುತ್ತಿವೆ — ಹೋಗುತ್ತೇನೆ ಅನ್ನಬಾರದು ಮಗೂ, 'ಬರುತ್ತೇನೆ' ಅನ್ನಬೇಕು. ಈಗ ನನಗೆ ಅರ್ಥವಾಗುತ್ತಿದೆ, ಆದರೆ ಆಗ ನನಗದು ಅರ್ಥವಾಗಿರಲಿಲ್ಲ — ಅವರ ಬಳಿಯಿಂದ ನಾನು 'ಹೊರಟುಹೋಗ' ಬಯಸಿದ್ದೆ; ಆದರೆ ಕೊನೆಯವರೆಗೂ ನನಗೆ 'ಹೋಗ'ಲಾಗಲಿಲ್ಲ. ನಮಗಾರಿಗೂ ಅದು ಸಾಧ್ಯವಿಲ್ಲ. ಮತ್ತೆ ನಾವು ಶ್ರೀಮಾತೆಯವರ ಬಳಿಗೆ ಹೋಗಲೇಬೇಕು. ನನ್ನ ಜೀವನದಲ್ಲಿ ಕೊನೆಯದಾಗಿ ನನಗೆ ಲಭಿಸಿದ್ದು ಇದೇ - ನಾನು ನನ್ನ ತಾಯಿಯ ಬಳಿಗೆ ಮರಳಿ ಬರುತ್ತಿದ್ದೇನೆ- I am coming to my Mother! *

* ಪ್ರಸಿದ್ಧ ಚಿತ್ರನಟ ಹಾಗೂ ನಿರ್ದೇಶಕರಾಗಿದ್ದ ಸೊಹ್ರಾಬ್ ಮೋದಿ (೧೮೯೭-೧೯೮೪)ಯವರು ಸ್ವಾಮಿ ನಿರಾಮಯಾನಂದಜಿಯವರಿಗೆ ಇಂಗ್ಲಿಷ್‌ನಲ್ಲಿ ನೀಡಿದ ವಿವರಣೆಯಿದು. ಈ ವಿವರಣೆ ನಮಗೆ ಲಭಿಸಿದ್ದು ಸ್ವಾಮಿ ನಿರಾಮಯಾನಂದಜಿಯವರಿಂದ. *(-ಸಂ)*